'ಈ ಪ್ರತಿಮೆ ಅನಾವರಣ ಇಷ್ಟು ವಿಜೃಂಭಣೆಯಿಂದ ನಡೆಯುತ್ತಿದೆಯೆಂದರೆ ಅದಕ್ಕೆ ಒಬ್ಬ ವ್ಯಕ್ತಿ ನಿದ್ರಾಹಾರಗಳನ್ನು ಮರೆತು ಶ್ರಮಿಸಿದ್ದಾನೆ. ಆತ ಮತ್ತಾರೋ ಅಲ್ಲ, ನಮ್ಮ ನರಸಿಂಹ ಅಣ್ಣ' ಎಂದನು.

ನರಸಿಂಹನ ಮುಖ ಹೊಳೆಯುತ್ತಿದ್ದರೆ, ದೊರೆಗೆ ಊಹಿಸದ ಆಘಾತವಾಯಿತು. ಇದೇನು ಇವನು ಅವನನ್ನು ಬೈಯುತ್ತಾನೆಂದುಕೊಂಡರೆ ಹೀಗೆ ಹೊಗಳುತ್ತಿದ್ದಾನೆ ಎಂದುಕೊಂಡನು. ಮಹೇಂದ್ರ ಇನ್ನೂ ಹೇಳುತ್ತಲೇ ಇದ್ದಾನೆ.

'ಹೌದು, ಈ ಸಭೆಗೆ ಅತಿಥಿಗಳಾಗಿ ಯಾರನ್ನು ಕರೆಯಬೇಕೆಂದು ನರಸಿಂಹನನ್ನು ಕೇಳಿದರೆ, ರಾಜಕೀಯ ನಾಯಕರು ಮಾತ್ರ ಬೇಡವೆಂದನು. ಅದು ನಮ್ಮ ನರಸಿಂಹ ಅಣ್ಣನ ಸ್ಪಷ್ಟ ಅಭಿಪ್ರಾಯ' ಎಂದು ದೊರೆಯತ್ತ ನೋಡಿದನು ಮಹೇಂದ್ರ.

ದೊರೆ ತನ್ನ ಉಪಾಯ ಫಲಿಸಲಿಲ್ಲವೆಂದು ಅರ್ಥವಾಗಿ ತಲೆತಗ್ಗಿಸಿ ನೆಲ ನೋಡುತ್ತಿದ್ದಾನೆ.

ಈಗ ನರಸಿಂಹ ಅಣ್ಣ ಮಾತನಾಡುತ್ತಾರೆ ಎಂದು ಬಂದು ದೊರೆಯ ಪಕ್ಕದಲ್ಲಿ ಕುಳಿತುಕೊಂಡನು ಮಹೇಂದ್ರ.

ನರಸಿಂಹನಿಗೆ ಸಂತೋಷಕ್ಕೆ ಆನಂದಬಾಷ್ಪ ಉಕ್ಕಿಬರುತ್ತಿದೆ. ಆದರೂ ನಾಲ್ಕು ಮಾತನಾಡುವ ಸಲುವಾಗಿ ತನ್ನನ್ನು ತಾನು ನಿಯಂತ್ರಿಸಿಕೊಂಡನು.

'ಎಲ್ಲರಿಗೂ ಜೈಭೀಮ್. ಸಭಾಧ್ಯಕ್ಷನಾಗಿ ನನ್ನ ತಮ್ಮ ಮಹೇಂದ್ರ ನಮ್ಮೆಲ್ಲರಲ್ಲಿ ಬುದ್ಧಿವಂತನು. ಅಷ್ಟೇ ಅಲ್ಲ, ನಮ್ಮ ತಳ ಸಮುದಾಯವನ್ನು ಮುಂದೆ ತರಲು ಶಿಕ್ಷಣವೇ ಮಾರ್ಗವೆಂದು ನಂಬಿದವನು. ಅದಕ್ಕೇ ಪಟ್ಟಣದಿಂದ ಬಂದು, ತಿಂಗಳಾನುಗಟ್ಟಲೆಯಿಂದ ಶ್ರಮಿಸಿ, ಈ ಕಾರ್ಯಕ್ರಮದ ಜವಾಬ್ದಾರಿಯನ್ನು ತನ್ನ ಹೆಗಲಮೇಲೆ ಹಾಕಿಕೊಂಡನು' ಎಂದು ಗದ್ಗದಿತನಾಗಿ ಹೇಳಿದನು.

ದೊರೆ ಕೈಕೈ ಹಿಸುಕಿಕೊಳ್ಳುತ್ತಿದ್ದಾನೆ. ಏನು ಇವರಿಬ್ಬರೂ, ನಾನು ಅಂದುಕೊಂಡಿದ್ದಕ್ಕೆ ಪೂರ್ತಿ ವಿರೋಧವಾಗಿ ಮಾಡುತ್ತಿದ್ದಾರೆ ಎಂದು ಒಳಗೊಳಗೆ ಕುದಿಯುತ್ತಿದ್ದಾನೆ. ತಾನು ಮಾಡಿದ ಸಂಚು ಮೊದಲ ಬಾರಿ ವಿಫಲವಾದುದನ್ನು ಸಹಿಸಿಕೊಳ್ಳಲಾಗುತ್ತಿಲ್ಲ. ಆದರೂ ಆ ಭಾವನೆ ತನ್ನ ಮುಖದಲ್ಲಿ ಕಾಣಿಸದಂತೆ ಮರೆಮಾಚಿಕೊಳ್ಳುತ್ತಿದ್ದಾನೆ.

ನರಸಿಂಹ ಮಾತ್ರ ಧ್ವನಿ ಜೋರು ಮಾಡಿ ಮಾತನಾಡುತ್ತಿದ್ದಾನೆ. 'ಇಷ್ಟು ಕಷ್ಟಪಟ್ಟರೂ, ತನಗೆ ಹೆಸರು ಖ್ಯಾತಿ ಬರಬೇಕೆಂದು ಎಂದಿಗೂ ಬಯಸಲಿಲ್ಲ. ಈ ಸಭೆಗೆ ನಾನೇ ಅಧ್ಯಕ್ಷನಾಗಬೇಕೆಂದು ಪಟ್ಟುಹಿಡಿದನು. ನಾವೆಲ್ಲರೂ ನಮಗಿಂತ ಹೆಚ್ಚಿಗೆ ಓದಿದವನು, ಸಾಮಾಜಿಕ ಜೀವನ ತಿಳಿದವನೆಂದು ಪಟ್ಟುಹಿಡಿದು ಮಹೇಂದ್ರನನ್ನು ಸಭಾಧ್ಯಕ್ಷನಾಗಿ ಇರಬೇಕೆಂದು ಬಯಸಿ ಒಪ್ಪಿಸಿದೆವು. ಆದರೆ, ನಮ್ಮ ಮಹೇಂದ್ರ ಎಷ್ಟು ಉದಾರ ಹೃದಯಿಯೆಂದರೆ, ಅಣ್ಣಾ ನಾನು ಭೋಜನ ತಯಾರಿಯ ಕಡೆ ಇರುತ್ತೇನೆಂದನು' ಎಂದು ದೊರೆಯತ್ತ ನೋಡಿದನು.

ದೊರೆಗೆ ನರಸಿಂಹನಲ್ಲಿ ತನ್ನನ್ನು ಭಯಪಡಿಸೋ ಶಕ್ತಿ ಯಾವುದೋ ಕಾಣಿಸಿ, ಮತ್ತೆ ತಲೆತಗ್ಗಿಸಿದನು.



ಆ ಸಭೆಗೆ ಮೊದಲ ದಿನ ದೊರೆಯ ಸಂಚು ಮಹೇಂದ್ರ, ನರಸಿಂಹರಿಗೆ ತಿಳಿದುಹೋಗಿದೆಯೆಂದು ದೊರೆಗೆ ಅರ್ಥವಾಯಿತು. ತನ್ನ ಎರಡನೇ ಉಪಾಯ ಕೂಡ ವಿಫಲವಾದುದಕ್ಕೆ ದೊರೆಗೆ ಅಲ್ಲಿಂದ ಎದ್ದುಹೋಗಿಬಿಡಬೇಕೆನಿಸಿತು. ಸಭೆಯ ಮಧ್ಯದಲ್ಲಿ ಎದ್ದುಹೋದರೆ ಜನ ಏನೆಂದುಕೊಳ್ಳುವರೋ, ನಾಳೆ ಚುನಾವಣೆಗಳಲ್ಲಿ ಓಟು ಹಾಕುವರೋ ಇಲ್ಲವೋ ಎಂದು ಕಷ್ಟಪಟ್ಟು ಅಲ್ಲಿಯೇ ಕುಳಿತಿದ್ದನು.

ಇನ್ನು ಊರ ಹಿಂದುಳಿದ ವರ್ಗದ ನಾಯಕರು ಮಾತನಾಡುತ್ತ 'ಈ ಮಕ್ಕಳು ನಮ್ಮ ಕಣ್ಣ ಮುಂದೆ ಬೆಳೆದವರು. ಇಷ್ಟು ದೊಡ್ಡ ಕಾರ್ಯಕ್ರಮ ಮಾಡಿ, ಊರ ಹೆಸರನ್ನು ನಿಲ್ಲಿಸುತ್ತಿದ್ದಾರೆ. ಕಡೆಗೆ ಭೋಜನಕ್ಕಾಗಿ ಕೂಡ ಸಾಲ ಮಾಡಿ ವ್ಯವಸ್ಥೆ ಮಾಡಿರುವುದು ನಮ್ಮೆಲ್ಲರಿಗೂ ಆಶ್ಚರ್ಯ ಉಂಟುಮಾಡಿದೆ' ಎಂದರು. ತಾನು ಕೊಡುತ್ತೇನೆಂದಿದ್ದ ಹತ್ತು ಸಾವಿರ ನೀಡದೆ ಕಾರ್ಯಕ್ರಮವನ್ನು ಹಾಳುಮಾಡಬೇಕೆಂದುಕೊಂಡಿದ್ದ ಕುತಂತ್ರ ಹಿಂದುಳಿದ ವರ್ಗದ ದೊಡ್ಡಮನುಷ್ಯರವರೆಗೂ ಹೋಗಿದೆಯೆಂದು ದೊರೆಗೆ ಅರ್ಥವಾಯಿತು. ಇನ್ನು ಲಾಭವಿಲ್ಲವೆಂದುಕೊಂಡನು. ಈ ಅವಮಾನವನ್ನು ಸಹಿಸಲಾಗತ್ತಿಲ್ಲ.

ಮಾತನಾಡಲಾಗದಂತೆ ಬಾಯಿ ಕಟ್ಟಿಹೋಗಿದೆ. ತಾನು ಮಾತನಾಡುವುದಿಲ್ಲವೆಂದು ಬಲವಂತವಾಗಿ ತಪ್ಪಿಸಿಕೊಂಡು ದೊರೆ. ಮಹೇಂದ್ರ, ನರಸಿಂಹರನ್ನು 'ಏನ್ರೋ ಹೀಗೆ ಮಾಡಿದಿರಿ' ಎಂದನು.

ಮಹೇಂದ್ರ ದೊರೆಯ ಕಿವಿಯಲ್ಲಿ ಹೇಳಿದನು.

'ದೊರೆ ಇದು ಹಿಂದಿನ ಕಾಲವಲ್ಲ. ಒಳ್ಳೆಯದನ್ನು ಮೈಕಿನಲ್ಲಿ ಹೇಳಬೇಕು. ಕೆಟ್ಟದನ್ನು ಕಿವಿಯಲ್ಲಿ ಹೇಳಬೇಕು' ಎಂದನು.

ಏಟಿಗೆ ಎದುರೇಟು ಎಂದು ದೊರೆಗೆ ಸ್ಪಷ್ಟವಾಯಿತು. ಸರಿಯಾಗಿ ಅದೇ ಸಮಯದಲ್ಲಿ, ಮೋಸಗಾರರಿಗೆ ತಕ್ಕ ಪಾಠ ಕಲಿಸುವವರು ಇದ್ದೇ ಇರುತ್ತಾರೆ ಎಂದು ಮೈಕಿನಲ್ಲಿ ಕೇಳಿಬರುತ್ತಿದೆ. ಅದು ತನಗೇ ಹೇಳಿದಂತೆ ಭಾಸವಾಗುತ್ತಿದೆ ದೊರೆಗೆ.

'ಇದು ಚಿಕ್ಕ ಝಲಕ್ ದೊರೆ. ಇನ್ನು ಇದಕ್ಕಿಂತ ದೊಡ್ಡ ಧಮ್ಕಿ ಬರಲಿರುವ ಚುನಾವಣೆಯಲ್ಲಿ ಇದೆ ನೋಡಿ' ಎಂದನು ನರಸಿಂಹ. ದೊರೆಯ ಮುಖ ಬಿಳುಚಿಕೊಂಡಿತು.

ನಾಚಿಕೆಯಿಂದ ತನ್ನ ಮುಖ ತೋರಿಸಲಾರದೆ ಇನ್ನು ಅಲ್ಲಿಂದ ಎದ್ದು, ಬಾಲ ಮುದುರಿದ ತನ್ನ ಮನೆಯ ನಾಯಿಯಂತೆ ಮನೆಯ ದಾರಿ ಹಿಡಿದನು. ದೊರೆಯ ಮೋಸದ ಬುಡಗಳು ಅಲುಗಾಡಲಾರಂಭಿಸಿ, ವಿಭಜಿಸಿ ಆಳುವ ಗುಟ್ಟು ರಟ್ಟಾಯಿತು.

ಇದನ್ನು ಧಿಕ್ಕರಿಸುವಂತೆ, ಇದೀಗ ಅನಾವರಣಗೊಂಡ ತೋರು ಬೆರಳ ಪ್ರತಿಮೆ ಆ ಊರ ಜನರೆಲ್ಲರಿಗೂ ಹೀಗೇ ಆತ್ಮಗೌರವದಿಂದ ಬದುಕುವಂತೆ ದಾರಿ ತೋರುತ್ತಿದೆ.